# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ66 /2024

**ಪಿ.ಡಬ್ಲ್ಯೂಃ7 (ಸಿಡಬ್ಲ್ಯೂಃ15 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ತಿಪ್ಪೇಸ್ವಾಮಿ** |
| **ತಂದೆಯ ಹೆಸರು** | : | **ಮಲ್ಲೇಶಿ** |
| **ವಯಸ್ಸು** | : | **22 ವರ್ಷ** |
| **ಕೆಲಸ** | : | **ಕೂಲಿ ಕೆಲಸ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 17.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿ ಪ್ರಾಸಾ.1 ರವರು ನನಗೆ ಗೊತ್ತಿರುತ್ತಾರೆ. ಮೃತ ತಾಯಣ್ಣ ನನಗೆ ಗೊತ್ತಿದ್ದರು. ಆರೋಪಿತರು ಸಹ ನಮ್ಮ ಊರಿನವರು.

**2.** ಮೃತ ತಾಯಣ್ಣನನ್ನು ಯಾರು ? ಹೇಗೆ ? ಎಂದೂ ? ಮತ್ತು ಯಾವ ಆಯುಧವನ್ನು ಉಪಯೋಗಿಸಿ ಹತ್ಯೆ ಗೈದರುಎನ್ನುವ ಬಗೆಗ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಪ್ರಶ್ನಿಸಿದಂತೆ ಯಾವುದೇ ಜಗಳವನ್ನು ಬಿಡಿಸಿಲ್ಲ. ಆರೋಪಿತರ ವಿರುದ್ದ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಪ್ರಶ್ನಿಸಿದಂತೆ ನಾನು ನ್ಯಾಯಾಧೀಶರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ.

**S.C.No.66 /2024**
**P.W.7 (C.W.15 )**
**Date : 17.7.2026**

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**3.** ದಿಃ2.5.2024 ರ ರಾತ್ರಿ 8.30 ರ ಸಮಯದಲ್ಲಿ ಪ್ರಾಸಾ.1 ರಿಂದ 6 ರವರು ಅವರು ತಮ್ಮ ಮನೆಯಲ್ಲಿದ್ದಾಗ ನ್ಯಾಯಾಲಯದಲ್ಲಿ ಹಾಜರು ಇರುವ ಎಲ್ಲಾ ಆರೋಪಿತರು ಅವರ ಮನೆಯ ಬಳಿ ಬಂದು ಮೃತ ತಾಯಪ್ಪ ಖೊಟಾ ನೋಟು ವಿಚಾರದಲ್ಲಿ ಆರೋಪಿತರ ವಿರುದ್ಧ ಅಪಪ್ರಚಾರ ಮಾಡಿರುತ್ತಾರೆ ಎಂಬ ಕಾರಣಕ್ಕೆ ಜಗಳ ತೆಗೆದು ಮೃತ ತಾಯಪ್ಪ ಮತ್ತು ಆತನ ಕುಟುಂಬ ಸದಸ್ಯರುಗಳಿಗೆ ಅವಾಚ್ಯ ಶಬ್ದಗಳಿಂದ ಬೈದರಲ್ಲದೇ ಆರೋಪಿತರ ಪೈಕಿ 2 ನೇ ಆರೋಪಿ ನಿಮ್ಮ ಸಮಕ್ಷಮ ಮೃತ ತಾಯಪ್ಪನನ್ನು ಹಿಡಿದುಕೊಂಡಿದ್ದು, 1 ನೇ ಆರೋಪಿ ಈಗ ನಿಮಗೆ ತೋರಿಸಿದ ಮುದ್ದೆಮಾಲು 3 ರ ಚಾಕುವನ್ನು ಉಪಯೋಗಿಸಿ ತಾಯಪ್ಪನ ಎದೆಯ ಭಾಗದಲ್ಲಿ ತಿವಿದು ತೀವ್ರ ಸ್ವರೂಪದ ರಕ್ತಗಾಯಗಳನ್ನು ಮಾಡಿದ್ದರು ಎಂದರೆ ಸರಿಯಲ್ಲ.

**4.** ಮೃತ ತಾಯಪ್ಪನನ್ನು ಚಿಕಿತ್ಸೆಯ ಸಲುವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ಆತ ಮಾರ್ಗ ಮಧ್ಯದಲ್ಲಿ ಸೂಚಿಸಿದ ತೀವ್ರ ಸ್ವರೂಪದ ಗಾಯದಿಂದನಿಧನ ಹೊಂದಿದ ಎಂದರೆ ಸರಿಯಲ್ಲ.

**5.** ಸೂಚಿಸಿದ ಸಂಗತಿಗಳನ್ನು ನಮೂದಿಸಿ ನೀವು ತನಿಖಾಧಿಕಾರಿಗಳಿಗೆ ಈಗ ನಿಮಗೆ ಓದಿ ಹೇಳಿದಂತೆ ಅಂದರೆ " ನಾನು ಮೇಲ್ಕಂಡ ವಿಳಾಸದಲ್ಲಿ ...... ಹೇಳಿಕೆ

ನೀಡಿರುತ್ತೇನೆ ” ಎಂದು ನಮೂದಿಸಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಓದಿ ಹೇಳಿದ ಹೇಳಿಕೆಯನ್ನು ಈಗ ನಿಪಿ.14 ಎಂದು ಗುರುತಿಸಲಾಯಿತು.

**6**. ದಿಃ29.5.2024 ರಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯೊಂದನ್ನು ಅಂದರೆ ಪೊಲೀಸರು ಹೇಳಿಕೊಟ್ಟಂತೆ ನುಡಿದಿರುತ್ತೇನೆ. ನನಗೆ ಈಗ ಓದಿ ಹೇಳಿದ ಹೇಳಿಕೆಯನ್ನು **ನಿಪಿ.15** ಎಂದು ಈಗ ಗುರುತು ಮಾಡಲಾಯಿತು.

**7.** ನೀವು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದು , ಆ ಕಾರಣ ಆರೋಪಿತರಿಗೆ ಸಹಾಯ ಮಾಡಲು ಸತ್ಯ ಮರೆಮಾಚಿ ಅಸತ್ಯ ನುಡಿದಿರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:**

**ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**